ಹೊರಗಿನಮಠಕ್ಕೆ ಹೋಗಿ ಸಂಪ್ರಜ್ಞಗ ಬೆಳಗಿ, ಎಡೆ ಹಿಡಿದು, ಪಡದಪ್ಪನ ಕಾಲಿಗೆ ಬಿದ್ದು ಅವನಿಗೆ ಎರಡು ಬಿಸಿ ರೊಟ್ಟಿ, ಒಂದು ವಾಟಿ ಹಾಲು ಕೊಟ್ಟು ಬಂದು ಮನೆಯ ಕೆಲಸದಲ್ಲಿ ತೊಡಗಿ ಬಿಡುತ್ತಿದ್ದಳು. ದಗದ ಬಗಸಿಯೊಳಗ ಅವ್ವನಿಗೆ ಕೈ ಜೋಡಿಸುತ್ತಾಳೆ. ಮನೆಯಲ್ಲಿ ತಾನಾಯಿತು ತನ್ನ ಕೆಲಸವಾಯಿತು ಎಂದುಕೊಂಡು ಕೆಲಸ ಹುಡುಕಿಕೊಂಡು ಮಾಡುತ್ತಿರುತ್ತಾಳೆ. ಹೊಲದಲ್ಲಿ ಕೆಲಸವಿದ್ದರೆ ಹೆಣ್ಣಾಳುಗಳ ಜೊತೆಗೆ, ಅವ್ವಳನ್ನು ಬಿಡಿಸಿ, ತಾನೇ ಹೋಗುತ್ತಾಳೆ. ಹೀಗಾಗಿ ದಿನವಿಡಿ ಕೆಲಸದಲ್ಲಿ ಮುಳುಗೇಳುತ್ತಿರುತ್ತಾಳೆ. ಬೇಜಾರು ಎಂಬುದಿಲ್ಲ. ವಿಶ್ರಾಂತಿ ಮರೆತೆ ಹೋಗಿದೆ. ಕೆಲಸದಲ್ಲಿಯ ಬದಲಾವಣೆಯೆ ವಿಶ್ರಾಂತಿ ಎಂದುಕೊಂಡಿದ್ದಾಳೆ. ಇವಳಿಂದಾಗಿ ಅಣ್ಣಂದಿರಿಬ್ಬರಿಗೂ ಕೆಲಸದ ಭಾರ ಅರ್ಧಕ್ಕರ್ಧ ಕಡಿಮೆಯಾಗಿದೆ ಎಂದರೂ ನಡೆದೀತು. ಹೊಲ ಮನೆಯ ಕೆಲಸದಲ್ಲಿ ಅವ್ವಅಪ್ಪನನ್ನು ಕೇಳಿ ಮಾಡುತ್ತಿದ್ದವರು ಈಗೀಗ ಅವಳನ್ನೇ ಕೇಳುತ್ತಿದ್ದಾರೆ. ದಾನಮ್ಮನಿಗೂ ಹಿರಿತನದ ಭಾವ ಬಂದು ಬಿಟ್ಟಿದೆ. ಕಾಯಕದಲ್ಲಿ ಮುಳುಗಿದ್ದರಿಂದಾಗಿ ಈಗ ಮಾತು ಕಡಿಮೆಯಾಗಿ ಮೌನಗೌರಿಯಾಗಿರುವುದು ಅವಳ ವ್ಯಕ್ತಿತ್ವಕ್ಕೊಂದು ಹೊಸ ಮೆರುಗು ತಂದುಕೊಟ್ಟಿದೆ.

ಅನಾದಿ ಕಾಲದಿಂದ ಹಿಡಿದು ಇಂದಿನ ಕಾಲದವರೆಗೂ ನಾದಿನಿಯರೆಂದರೆ ನಾಲ್ಕು ಮಾರು ದೂರ ಸರಿಯುವದನ್ನೂ ಹಾಗೂ ಅವರ ಮೇಲೆ ಒಂದು ಸಂಶಯದ ಕಣ್ಣು ಇಟ್ಟಿರುವ ಸೊಸೆಯಂದಿರನ್ನು ನಾವು ನೋಡುತ್ತೇವೆ. ಅಷ್ಟೆ ಏಕೆ ನಾದಿನಿಯರಿರುವ ಮನೆಗಳಿಗೆ ಹೆಣ್ಣು ಕೊಡದವರೂ ಇದ್ದಾರೆ. ಅತ್ತಿಗೆ–ನಾದಿನಿಯರ ಮಧ್ಯ ಸದಾಕಾಲ ಹಾವು ಮುಂಗುಸಿ ಆಟ ನಡೆದೇ ಇರುತ್ತದೆ. ಅತ್ತಿಗೆಯರ ಬಗ್ಗೆ ತಂದೆತಾಯಿಯರ ಕಿವಿಗೆ ವಿಷ ತುಂಬುವ ನಾದಿನಿಯರು, ನಾದಿನಿಯರ ಬಗ್ಗೆ ಗಂಡನ ತಲೆ ತುಂಬುವ ಅತ್ತಿಗೆಯರಿಂದಾಗಿ ಮನೆಯಲ್ಲಿ ಗುಸುಗುಸು–ದುಸುಮುಸು ಸಣ್ಣಗೆ ಸುರುವಾಗಿ ಕುರುಕ್ಷೇತ್ರವೇ ನಡೆಯುತ್ತಿರುತ್ತದೆ. ನಾದಿನಿ ದನದ ಕೊಟ್ಟಿಗೆಯಲ್ಲಿ ತಟ್ಟಿ ಕಟ್ಟಿಕೊಂಡು ಮತ್ತೊಬ್ಬರ ಹೊಲ ಮನೆಯಲ್ಲಿ ಕೂಲಿನಾಲಿ ಮಾಡಿ ಬಾಳ ಬಂಡಿ ಸಾಗಿಸಿದ ಸಾಕಷ್ಟು ಉದಾಹರಣೆಗಳನ್ನು ಕಣ್ಣಾರೆ ಕಂಡಿದ್ದೇವೆ. ಆದರೆ ದಾನಮ್ಮ ಇಂಥವಕ್ಕೆಲ್ಲ ಅಪವಾದ. ಪ್ರೀತಿಯೇ ಇರಲಿ, ದ್ವೇಷವೇ ಇರಲಿ ಅದು ಪಾರಸ್ಪರಿಕ ಅಲ್ಲವೇ? ಒಬ್ಬರ ಮೇಲೆ ಪ್ರೀತಿ ಸುರಿಸಿದರೆ ಪ್ರತಿಯಾಗಿ ಪ್ರೀತಿ ಪಡೆಯುತ್ತೇವೆ. ಅದೇ ದ್ವೇಷ ಸಾಧಿಸಿದರೆ ಪ್ರತಿಯಾಗಿ ಪಡೆಯುವದು ದ್ವೇಷವೇ ಅಲ್ಲವೆ? ಪ್ರೀತಿ ಮಾಡಿಯೂ ದ್ವೇಷ, ದ್ವೇಷ ಮಾಡಿಯೂ ಪ್ರೀತಿ ಪಡೆದುಕೊಂಡವರನ್ನು ನಾನಂತೂ ಕಂಡಿಲ್ಲ, ಕೇಳಿಲ್ಲ. ಬಿತ್ತಿದ್ದನ್ನು ಬೆಳೆಯುವುದು ನಿಸರ್ಗದ ಗುಣವಲ್ಲವೇ? ದಾನಮ್ಮ ಅತ್ತಿಗೆಯರನ್ನು ಅಪಾರವಾಗಿ ಪ್ರೀತಿಸಿದಳು, ಅವರನ್ನು 'ತಂಗಿಯರು' ಎಂದು ಕರೆದಳು, ಕೂಡಿದ ಘರಾಣೆದಿಂದ ಬಂದ ಸೊಸೆಯಂದಿರು ಅವಳನ್ನು ಅಷ್ಟೇ ಪ್ರೀತಿಸಿದರು. 'ಸಣ್ಣವ್ವಾ' ಎಂದೇ ಸಂಬೋಧಿಸಿದರು. ಅವರಲ್ಲಿ ಮಕ್ಕಳನ್ನು ದಾನಮ್ಮ ಕಂಡರೆ, ಅವರು ತಾವು ಬಿಟ್ಟು ಬಂದ ಮನೆಯ ತಾಯಿಯನ್ನು ಕಂಡರು. ಮುಚ್ಚಿದ ಮುಟಗಿ ಹಾಂಗ ಇದ್ದ ಮನೆ ನೋಡಿದ್ರ ಮನಸ್ಸು ತುಂಬತೈತಿ. ಅತ್ತಿಗೆ–ನಾದಿನಿಯರು ಹ್ಯಾಗಿದ್ದರೆ ಚಂದ ಅಂಬೊ ಪ್ರಶ್ನೆಗೆ ಹೀಗಿರಬೇಕೆಂಬ ಉತ್ತರದ ಹಾಗಿದ್ದಾರೆ.

★★★

ಮೂರುಸಂಜೀಲಿ ಮಲಿಕಟ್ಟಿನ್ಯಾಗ ಗುಳಿಗಿ ಇಟಗೊಂಡು ಕೂರಿ ಬೀರನ ಮನೆಗೆ ಹೋದಳು. ಆಡುಗಳ ಕಟ್ಟಿದ ಕಾಲನ್ನು ಕೈಯಾಡಿಸಿ ಪರೀಕ್ಷೆ ಮಾಡಿದಳು. ಬರೊಬ್ಬರಿ ಇದ್ದದ್ದನ್ನು ಖಾತ್ರಿ ಮಾಡಿಕೊಂಡು ವಾತ್ಸಲ್ಯದಿಂದ ಆಡುಗಳ ಮೈದಡವಿದಳು. ಬಾಲ ಆಡಿಸುತ್ತ 'ಬ್ಯಾ' ಎಂದು ದಾನಮ್ಮತ್ತಿ ಕೈಗಳನ್ನು ಮೂಸಿದವು. "ಅರಾಮಾಗಿರ್ಲಿ ಬುಬ್ಬನ್ಯಾರ" ಎನ್ನುತ್ತ, "ಖಾಲಿ ಹೊಟ್ಯಾಗ ಗುಳಗಿ ಅರೆದು ಪುಡಿ ಮಾಡಿ ಕಾಸಿ ಆರಿಸಿದ ಹಾಲಿನ್ಯಾಗ ಗೊಟ್ಟಲ್ಲೆ ಹಾಕು. ಇಂದು ಮತ್ತೆ ನಾಳೆ ದಿನಕ್ಕೆರಡು ನಾಡದ್ದರಿಂದ ದಿನಕ್ಕೊಂದರಂತೆ ಹಾಕು" ಎಂದಳು. ಗುಳಿಗಿ ಇಸಿದುಕೊಳ್ಳುತ್ತ ಬೀರ,